ಅಜ್ಜ ಅಂಕೇಗೌಡನ ಹೆಂಡತಿ ಪಾಪಮ್ಮನಿಗೆ, 'ಅಮ್ಮಣ್ಣಿ ಜೋಳಿಗಿ ದವಸ ಮಾರಿ ಒಂದು ಕಾಸು ತಗೊಂಡಿದ್ದೆ ಇನ್ನೂ ಎಲ್ಡು ಬೆಳೆದ ಮಕ್ಕಳವೀ, ಆ ಕಾಸ್ನ ಗೌಡ್ನಗ ಕೊಟ್ಟಿವ್ನಿ' ಎಂದಾಗ, 'ಅದ್ಯಾವುದು ನಂಗ ಗೊತ್ತಿಲ್ಲಾ' ಎಂದಾಗ ಅಂಕೇಗೌಡ ಹಾಸಿಗೆಯಿಂದಲೇ ಮನೆಯ ಅಟ್ಟದತ್ತ ಬೆರಳು ತೋರಿಸುತ್ತಿದ್ದ. ಆದರೆ ಗೌಡನ ಹೆಂಡ್ತಿ ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಹೀಗಾದ ಒಂದು ತಿಂಗಳಿಗೆ ಅಂಕೇಗೌಡ ತೀರಿಕೊಂಡ. ಚಿಂತಾಕ್ರಾಂತರಾದ ಅಜ್ಜಿ ಅಜ್ಜ, ತೋಟಿ ಮಿಂಚಾಮಿ ಒಂದು ಸಂಜೆ ಆಲದೇನಹಳ್ಳಿ ಗುಡಿ ಮುಂದೆ ಹಲಗೆ ನುಡಿಸುತ್ತಾ...

ಡಂಗುಣಕ, ಡಂಗುಣಕ
ಅಂಕೇಗೌಡನ ಹೆಂಡ್ತಿ
ಈಬೂತಪ್ಪನ ಕಾಸು
ಡಂಗುಣಕ ಡಂಗುಣಕ

ಹಾಡುತ್ತಿದ್ದ. ಇಸ್ಯ ತಿಳಿದ ಅಂಕೇಗೌಡನ ಹೆಂಡತಿ ಪಾಪಮ್ಮ ಬಿರುಗಾಳಿಯಂತೆ ಬಂದು, 'ಲೇ ಈಬೂತಿ, ತಕಾ ನಿನ್ನ ಕಾಸು. ಲೇ ಮಿಂಚಾಮಿ ನಿಲ್ಸೊ ನಿನ್ನ ಪದಾ ನನ್ನ ಆಟಗಳ್ಳ' ಎಂದು ಬೆಳ್ಳಿಕಾಸನ್ನು ಎಸೆದು ಹೋದಳು.

ಅಜ್ಜ ಶೀಶೆ ಹೆಂಡವನ್ನು ಮಿಂಚಾಮಿಯೊಂದಿಗೆ ಹಂಚಿಕೊಂಡು ಕುಡಿಯುತ್ತಿದ್ದರೆ, ಅಜ್ಜಿ, 'ಸಕಲ ದುರಿತ ನಿವಾರಣ ಕೈವಾರದ ಭೀಮಲಿಂಗ...' ಹಾಡುತ್ತಲೇ ಇದ್ದಳು.

## ಬಾಲಗುರುಮೂರ್ತಿ

ಲೇಖಕರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಮೇಡಹಳ್ಳಿಯವರು. ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮತ್ತು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ದಕ್ಷಿಣ ಭಾರತದ ಪ್ರಾದೇಶಿಕ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ.

ಕನ್ನಡ ವಿಶ್ವವಿದ್ಯಾಲಯ ಮತ್ತು ವಾರ್ತಾ ಇಲಾಖೆ ಹೊರತಂದ ಬುಡಕಟ್ಟು ಚಿತ್ರಸಂಪುಟವನ್ನು ಸಂಪಾದಿಸಿದ್ದಾರೆ. ಕರ್ನಾಟಕ ರಾಜ್ಯದ ಅಲೆಮಾರಿ ಬುಡಕಟ್ಟುಗಳ ರಾಜ್ಯಾಧ್ಯಕ್ಷರಾಗಿ, ಅಖಿಲಭಾರತ ಬುಡಕಟ್ಟುಗಳ ಒಕ್ಕೂಟದ ಪ್ರಧಾನಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ.

'ಬುಡ್ಗನಾದ', 'ಕದಪಾಯಿ', 'ದಿ ಹಾಮ್ಲೆಟ್ ಇನ್ ಲವ್' ಇವರ ನಾಟಕಗಳು. ಪ್ರಸ್ತುತ ಬೆಂಗಳೂರಿನ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯಲ್ಲಿ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.